ರಾಷ್ಟ್ರೀಯ ಹೆದ್ದಾರಿ ನಂ.218ರ ಕೊಲ್ಹಾರ ಹಾಗೂ ರಾಷ್ಟ್ರೀಯ ಮನಗೂಳಿ ಗ್ರಾಮಗಳಲ್ಲಿ ಮೇಲ್ಮಟ್ಟದ ಆಸ್ಪತ್ರೆಗಳನ್ನು ತೆರೆಯುವುದು.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 1085(1350)

ಪ್ರಶ್ನೆ ಕೇಳಿದ ಸದಸ್ಯರು: ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನಬಾಗೇವಾಡಿ)

ಉತ್ತರಿಸಬೇಕಾದ ಸಚಿವರು: ಡಾ॥ಎ.ಬಿ.ಮಲಕರೆಡ್ಡಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆಗಳು

ಅ) ರಾಷ್ಟ್ರೀಯ ಹೆದ್ದಾರಿ ನಂ.218ರ ಕೊಲ್ಹಾರ ಹಾಗೂ ರಾಷ್ಟ್ರೀಯ ಹೆದ್ದಾರಿ 135 ಮನಗೂಳಿ ಗ್ರಾಮಗಳಲ್ಲಿ ಮೇಲ್ಮಟ್ಟದ ಆಸ್ಪತ್ರೆಯನ್ನು ತೆರೆಯುವ ವಿಚಾರ ಸರ್ಕಾರದ ಮುಂದೆ ಇದೆಯೇ?

ಆ) ಮೇಲ್ಪಟ್ಟದ ಆಸ್ಪತ್ರೆಯ ಅಗತ್ಯತೆಯನ್ನು ಸರ್ಕಾರ ಮನಗಂಡಿದೆಯೇ?

ಉತ್ತರಗಳು

ಅ ಮತ್ತು ಆ) ಉದ್ಭವಿಸುವುದಿಲ್ಲ.

ಕೃಷ್ಣಾ ನದಿ ನೀರನ್ನು ಬಸವನಬಾಗೇವಾಡಿ ಕ್ಷೇತ್ರಕ್ಕೆ ಒದಗಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1086(1351)

ಸದಸ್ಯರ ಹೆಸರು: ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನಬಾಗೇವಾಡಿ)

ಉತ್ತರಿಸುವ ಸಚಿವರು: ಶ್ರೀ ಎಂ.ವೈ.ಘೋರ್ಪಡೆ(ಗ್ರಾಮೀಣಾಭಿವೃದ್ಧಿ ಸಚಿವರು)

ಪ್ರಶ್ನೆ

ಅ. ಬಸವನಬಾಗೇವಾಡಿ ಮತಕ್ಷೇತ್ರಕ್ಕೆ ಕೃಷ್ಣಾ ನದಿಯಿಂದ ಕುಡಿಯುವ ನೀರನ್ನು ಒದಗಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಆ. ಹಾಗಿದ್ದಲ್ಲಿ, ಇದರ ಅನುಷ್ಠಾನಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಉತ್ತರ

ಅ. ಇಲ್ಲ

ಆ. ಉದ್ಭವಿಸುವುದಿಲ್ಲ

ಬಿಜಾಪುರ ತಾಲ್ಲೂಕಿನಲ್ಲಿ ಬರುವ ಐತಿಹಾಸಿಕ ಸ್ಥಳಗಳ ಅಭಿವೃದ್ಧಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1087(1352)

ಸದಸ್ಯರ ಹೆಸರು: ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನಬಾಗೇವಾಡಿ)

ಉತ್ತರಿಸುವ ಸಚಿವರು: ಶ್ರೀಮತಿ ರಾಣಿ ಸತೀಶ್(ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು)

ಪ್ರಶ್ನೆ

ಅ) ಬಿಜಾಪುರ ತಾಲ್ಲೂಕಿನಲ್ಲಿ ಬರುವ ಐತಿಹಾಸಿಕ ಜನ್ಮ ಸ್ಥಳ ಮತ್ತು ಐಕ್ಯ ಸ್ಥಳ ಶರಣ ಹರುಳಯ್ಯನವರ ಹರಳಯ್ಯನ ಗುಂಡ ಹಾಗೂ ಉಪ್ಪಿಲದಿನ್ನಿ ಶ್ರೀ ಸಂಗಮೇಶ್ವರ ದೇವಸ್ಥಾನ ಹಾಗೂ ಬಸವನ ಬಾಗೇವಾಡಿ ತಾಲ್ಲೂಕಿನ ಕೋಲಾರ ಗ್ರಾಮದ ಐಕ್ಯಸ್ಥಳ ಮುಂತಾದ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

ಉತ್ತರ

ಅ) ಈ ಇಲಾಖಾ ವತಿಯಿಂದ ಪ್ರಸ್ತುತ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ನಾಗಮಂಗಲ ತಾಲ್ಲೂಕಿನಲ್ಲಿ ಆಶ್ರಯ ಯೋಜನೆ ಮನೆಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1089(1076)

ಸದಸ್ಯರ ಹೆಸರು: ಶ್ರೀ ಚಲುವರಾಯಸ್ವಾಮಿ.ಎನ್(ನಾಗಮಂಗಲ)

ಉತ್ತರಿಸುವ ಸಚಿವರ ಹೆಸರು: ಶ್ರೀ ಖಮರುಲ್ ಇಸ್ಲಾಂ(ವಸತಿ ಸಚಿವರು)